5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದ.ಕ., ಮಂಗಳೂರು,
ಕಾರ್ಯನಿರ್ವಹಣೆಃ ಪುತ್ತೂರು, ದ.ಕ.

## ಸೆಷನ್ಸ್ ಕೇಸ್ ನಂಬ್ರ **5006/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುರೇಶ್ ನಲ್ಕೆ | ಪ್ರಾಸಾಃ 3 |
| ತಂದೆಯ ಹೆಸರು | : | ಸಂಜೀವ ನಲ್ಕೆ | ಚಾಸಾಃ 5 |
| ಪ್ರಾಯ | : | 41ವರ್ಷ | ದಿನಾಂಕಃ **21.08.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಭೂತಾರಾಧನೆ | |
| ವಾಸಸ್ಥಳ | : | ಕುಕ್ಕೊಟ್ಟು ಮನೆ, ಬೆಳಾಲು ಗ್ರಾಮ, ಬೆಳ್ತಂಗಡಿ ತಾಲೂಕು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

ಚಾ.ಸಾ.1 ನನಗೆ ಮಾವನಾಗಬೇಕು, ಅವರು ನನ್ನ ಹೆಂಡತಿಯ ಚಿಕ್ಕಪ್ಪ. ಚಾ.ಸಾ.6ರವರು ಚಾ.ಸಾ.1ರವರ ತಮ್ಮ. ಕೊಲೆಯಾದ ಯಶವಂತ ಚಾ.ಸಾ.1ರವರ ಮಗನಾಗಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯು ನನಗೆ ತಮ್ಮ ಅಂದರೆ ನನ್ನ ಹೆಂಡತಿಯ ತಂಗಿಯ ಗಂಡ. ಮೃತ ಯಶವಂತನಿಗೆ ನ್ಯಾಯಾಲಯದ ಮುಂದೆ ಇರುವ ಆರೋಪಿಯು ಬಾವನಾಗಬೇಕು.

2. ಯಶವಂತ ಯಾವ ರೀತಿ ಕೊಲೆಯಾಗಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ಅಂದಾಜು 6-7 ವರ್ಷಗಳ ಹಿಂದೆ ಯಶವಂತನ ಕೊಲೆಯಾಗಿರುತ್ತದೆ. ಆತನ ಕೊಲೆಯಾದ ಮರುದಿನ ನನ್ನ ಸಂಬಂಧಿಕರು ನನಗೆ ಕರೆ ಮಾಡಿ, ಯಶವಂತನ ಕೊಲೆಯಾಗಿರುವ ವಿಚಾರ ನನಗೆ ತಿಳಿಸಿರುತ್ತಾರೆ. ಆದರೆ ಯಶವಂತನನ್ನು ಯಾರು ಕೊಲೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

3. ಯಶವಂತನ ಕೊಲೆಯಾದ ದಿನ ಆತನು ಎಲ್ಲಿಗೆ ಹೋಗಿದ್ದ ಎಂಬುವುದು ನನಗೆ ಗೊತ್ತಿರುವುದಿಲ್ಲ. ಆ ದಿನ ನಾನು ಪುತ್ತೂರಿಗೆ ದೈವಾರಾಧನೆಗಾಗಿ ಬಂದಿದ್ದೆನು. ಆ ದಿನ ನನ್ನ ಜೊತೆ ನ್ಯಾಯಾಲಯದ ಮುಂದೆ ಇರುವ ಆರೋಪಿ ದೈವಾರಾಧನೆಗಾಗಿ ಬಂದಿದ್ದನು. ದೈವಾರಾಧನೆಯು ಬೆಳಿಗ್ಗೆ 5-30 ಗಂಟೆವರೆಗೂ ನಡೆದಿರುತ್ತದೆ. ಆ ದಿನ ಬೆಳಗ್ಗಿನ ಜಾವ 5.30 ಗಂಟೆಯ ನಂತರ ನನ್ನ ಕುಟುಂಬದವರೊಂದಿಗೆ ಆಟೋದಲ್ಲಿ ನಾನು ಮನೆಗೆ ಬಂದಿರುತ್ತೇನೆ. ದೈವಾರಾಧನೆಯ ಬಳಿಕ ಆರೋಪಿಯು ತನ್ನ ಮನೆಗೆ ಹೋಗುವುದಾಗಿ ಹೇಳಿ ಹೋಗಿರುತ್ತಾನೆ.

4. ಯಶವಂತನನ್ನು ಯಾರು ಕೊಲೆ ಮಾಡಿರುತ್ತಾರೆ ಎಂದು ನಾನು ಇದುವರೆಗೂ ತಿಳಿದುಕೊಂಡಿರುವುದಿಲ್ಲ. ಯಶವಂತನ ಕೊಲೆ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ದಾಖಲಾತಿಗಳನ್ನು ಪರಿಶೀಲಿಸಿ, ಸರಕಾರಿ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

5. ದಿನಾಂಕಃ 06.03.2019 ರಂದು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ನಾನು ದಿನಾಂಕಃ 02.03.2019 ರಂದು ಪುತ್ತೂರಿನಲ್ಲಿ ದೈವ ನರ್ತನೆ ಇದ್ದು, ಆರೋಪಿಯನ್ನು ನಾನು ಬರುವಂತೆ ಹೇಳಿದ್ದೆನು, ಅದರಂತೆ ಸಂಜೆ 03.00 ಗಂಟೆಗೆ ನಾನು ನನ್ನ ಆಟೋ ರಿಕ್ಷಾದಲ್ಲಿ ಉಪ್ಪಿನಂಗಡಿ ಸಮೀಪದ ನೆಕ್ಕಿಲಾಡಿ ಎಂಬಲ್ಲಿ ಆರೋಪಿಯನ್ನು ಕಾಯುತ್ತಿದ್ದು, ಸುಮಾರು 03.30 ಗಂಟೆಗೆ ಆರೋಪಿಯು ಆತನ ಟಿವಿಎಸ್ ವೇಗೊ ನಂಬ್ರ ಕೆಎ-19-ಇಎಫ್-0826 ನೇದರಲ್ಲಿ ಬಂದು, ಅದನ್ನು ಪೆಟ್ರೋಲ್ ಬಂಕ್ ಬಳಿ ನಿಲ್ಲಿಸಿ, ನನ್ನ ಆಟೋದಲ್ಲಿ ಪುತ್ತೂರಿಗೆ ತೆರಳಿದೆವು ಎಂದು

ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮರುದಿನ ದಿನಾಂಕಃ 03.03.2019 ರಂದು ಬೆಳಗ್ಗಿನ ಜಾವ 02.00 ಗಂಟೆಗೆ ಪುತ್ತೂರಿನಿಂದ ಹೊರಟು 03.00 ಗಂಟೆಗೆ ಉಪ್ಪಿನಂಗಡಿ ಸಮೀಪದ ನೆಕ್ಕಿಲಾಡಿ ತಲುಪಿದ್ದು, ರಿಕ್ಷಾದಿಂದ ಆರೋಪಿಯು ಇಳಿದು, ಉಪ್ಪಿನಂಗಡಿ ಕಂಬಳಕ್ಕೆ ಹೋಗಿ ನಂತರ ಮನೆಗೆ ಹೋಗುವುದಾಗಿ ನನಗೆ ತಿಳಿಸಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ದಿನಾಂಕಃ 03.03.2019 ರಂದು 09.00 ಗಂಟೆಗೆ ಯಶವಂತನನ್ನು ಉಪ್ಪಿನಂಗಡಿ ಕಂಬಳ ಗದ್ದೆಯ ಬಳಿ ಆರೋಪಿಯು ಚೂರಿಯಿಂದ ತಿವಿದು ಕೊಲೆ ಮಾಡಿರುವ ವಿಚಾರ ಚಾ.ಸಾ.1ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಘಟನೆಯ ಬಗ್ಗೆ ನಾನು ಕೇಳಿ ತಿಳಿದುಕೊಂಡಿದ್ದು, ಅದರಂತೆ ಆರೋಪಿಯು ಉಪ್ಪಿನಂಗಡಿ ಕಂಬಳಕ್ಕೆ ಹೋಗಿ ಯಶವಂತನನ್ನು ಗ್ಯಾರೇಜ್ ಹತ್ತಿರ ಕರೆದುಕೊಂಡು ಹೋಗಿ, ಆನಂದನಿಂದ ಪಡೆದ ರೂ.3,000/- ಸಾಲದ ಹಣವನ್ನು ವಾಪಾಸ್ಸು ನೀಡಬೇಕೆಂದು ಕೇಳಿದಾಗ ಯಶವಂತನು ಸ್ವಲ್ಪ ತಡವಾಗಿ ಹಣ ನೀಡುತ್ತೇನೆ ಎಂದು ಹೇಳಿದ್ದರಿಂದ ಆರೋಪಿಯು ಸಿಟ್ಟುಗೊಂಡು ಯಶವಂತನಿಗೆ ಚೂರಿಯಿಂದ ತಿವಿದು ಕೊಲೆ ಮಾಡಿರುವ ವಿಚಾರ ನನಗೆ ತಿಳಿದು ಬಂದಿರುತ್ತದೆ ಮತ್ತು ಈ ಎಲ್ಲಾ ವಿಚಾರಗಳನ್ನು ನಾನು ಪೊಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿ.ಪಿ.4 ಎಂದು ಗುರುತಿಸಲಾಯಿತು.

6. ಪ್ರಾ.ಸಾ.1ರವರು ಈಗ ಮೃತಪಟ್ಟಿರುತ್ತಾರೆ. ನ್ಯಾಯಾಲಯದ ಮುಂದೆ ಆರೋಪಿಯು ನನ್ನ ಹೆಂಡತಿಯ ತಂಗಿಯ ಗಂಡನಾಗಿರುವುದರಿಂದ ಆತನನ್ನು ಶಿಕ್ಷೆಯಿಂದ ತಪ್ಪಿಸಲು ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಜೆ.ಪಿ. ವಕೀಲರಿಂದಃ</u>

7. ಆ ದಿನ ಪುತ್ತೂರಿನಲ್ಲಿ ನಡೆದ ದೈವಾರಾಧನೆಯಲ್ಲಿ ಆರೋಪಿಯು ಕಲ್ಲುರ್ಟಿ ದೈವ ನರ್ತನ ಮಾಡಿದ್ದರು. ನಾನು ಗುಳಿಗ ದೈವ ನರ್ತನ ಮಾಡಿರುತ್ತೇನೆ. ಕಲ್ಲುರ್ಟಿ ಎಂದರೆ ಹೆಣ್ಣು ದೈವ. ಗುಳಿಗ ಎಂದರೆ ಗಂಡು ದೈವ. ಆ ದಿನ ಮೊದಲು ಕಲ್ಲುರ್ಟಿ ದೈವ ನರ್ತನ ಆಗಿ ನಂತರ ಗುಳಿಗ ದೈವ ನರ್ತನ ಆಗಿರುತ್ತದೆ. ಕಲ್ಲುರ್ಟಿ ದೈವ ನರ್ತನ ಮತ್ತು ಗುಳಿಗ ದೈವ ನರ್ತನ ಮುಗಿಯುವಷ್ಟರಲ್ಲಿ ಬೆಳಗ್ಗಿನ ಜಾವ 05.00 ಗಂಟೆಯಾಗಿತ್ತು. ದೈವ ನರ್ತನ ನಡೆದ ಜಾಗದಿಂದ ನೆಕ್ಕಿಲಾಡಿ ಎಂಬಲ್ಲಿಗೆ ಬರಲು ಸುಮಾರು 1 ಗಂಟೆ 15 ನಿಮಿಷ ಬೇಕಾಗುತ್ತದೆ. ಪುತ್ತೂರಿನಿಂದ ನೆಕ್ಕಿಲಾಡಿಗೆ ನಾನು, ನನ್ನ ಕುಟುಂಬದವರು ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿ ಒಟ್ಟಿಗೆ ನನ್ನ ಆಟೋದಲ್ಲಿ ಬಂದಿರುತ್ತೇವೆ. ನೆಕ್ಕಿಲಾಡಿಗೆ ಬಂದ ನಂತರ ನಾನು ನನ್ನ ಮನೆಗೆ ಮತ್ತು ಆರೋಪಿಯು ತನ್ನ ಮನೆಗೆ ಹೋಗಿರುತ್ತೇವೆ. ಆ ದಿನ ನನ್ನ ಹೆಂಡತಿಯನ್ನು ದೈವಾರಾಧನೆ ಸಮಯದಲ್ಲಿ ತೆಂಬರೆ ಬಡಿದು, ಪ್ರಾರ್ಥನೆ ಮಾಡಲಿಕ್ಕಾಗಿ ಕರೆದುಕೊಂಡು ಹೋಗಿದ್ದೆನು.

<u>ಮರುವಿಚಾರಣೆಃ</u> ಇಲ್ಲ.

(ಸಾಕ್ಷಿದಾರರ ಹೇಳಿಕೆಯಂತೆ ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು, ಕಾರ್ಯನಿರ್ವಹಣೆಃ ಪುತ್ತೂರು.